# 10 ನೇ ತರಗತಿ ಸಿರಿ ಕನ್ನಡ – ಸಾಫಲ್ಯ ಪರೀಕ್ಷೆ– 2016

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**I. ಶಿಕ್ಷಕರು ಹೇಳುವ ಪದಗಳು , ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

**(ಶಿಕ್ಷಕರು ಹೇಳುವ ಮೂರು ಪದಗಳು,ಮೂರು ವಾಕ್ಯಗಳಲ್ಲಿ ಎರಡೆರಡು ಸರಿ ಇದ್ದರೆ "ಎ" ಶ್ರೇಣಿ ನೀಡುವುದು)**

| |
|---|
| |
| |
| |
| |
| |
| |

**II. ಕೆಳಗಿನ ಗದ್ಯಭಾಗವನ್ನು ಓದಿ,ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಲೀಚ್ ಹೇಗೆ ರಕ್ತ ಹೀರುತ್ತದೆ ತಿಳಿಯೋಣ. ಅದರ ಬಾಯಿ ಕಡೆ ಎರಡು ಹೀರುಕಗಳಿವೆ. ಒಂದನ್ನು ಊರಿ ಅದರಿಂದ ನೆತ್ತರು ಹೀರಲು ಪ್ರಾರಂಭಿಸುವುದು. ಇನ್ನೊಂದನ್ನು ಗಾಯದೆಡೆಗೆ ಊರಿ ಅದರಿಂದ ಹಿರುಡಿನ್ ಎಂಬ ರಕ್ತ ಕರುಣೆಗಟ್ಟದಂತಹ ರಾಸಾಯನಿಕವನ್ನೊಳಗೊಳಗೊಂಡ ಜೊಲ್ಲನ್ನು ಸ್ರವಿಸುವುದು. ಅದರ ಸಂಪರ್ಕದಿಂದ ತಾತ್ಕಾಲಿಕವಾಗಿ ಗಾಯದ ಆಸುಪಾಸು ಜೋಮು ಹಿಡಿದು ಸ್ಪರ್ಶ ಹಾನಿ ಉಚಿಟಾಗುತ್ತದೆ. ಸುಮಾರು ಒಂದು ನೂರು ಹರಿತದ ಹಲ್ಲುಗಳಿರುವ ಇಂಬಳ ಕಚ್ಚಿದರೆ ತಿಳಿಯುವುದೆ ಇಲ್ಲ. ಅಂತಹ ಸುವ್ಯವಸ್ಥೆಯ ಕಡಿತ ಅದು! ಬಿಸಿ ರಕ್ತ ಪ್ರಾಣಿಗಳ ಪೈಕಿ ಜಿಗಣೆಗೆ ಕುದುರೆಯ ನೆತ್ತರು ಎಂದರೆ ಪಂಚಪ್ರಾಣ. ಇದೀಗ ನಿಸರ್ಗದಲ್ಲಿ ಜವುಗು, ಕೆರೆ–ತೊರೆ ಕಮ್ಮಿಯಾಗುತ್ತಿರುವುದರಿಂದ ಜಿಗಣೆ ಸಂತತಿ ಇಳಿಮುಖವಾಗಿದೆ. ಹಾಗಾಗಿ ಕುದುರೆ ಲಾಯಗಳಲ್ಲಿ ಕುದುರೆ ಸಂಗಡ ಲೀಚ್ ಸಾಕುವ ಹೊಸ ವ್ಯವಸಾಯ ಪದ್ಧತಿ ಯೂರೋಪಿನಲ್ಲಿನ ಜಾರಿಯಲ್ಲಿದೆ.

**ಪ್ರಶ್ನೆಗಳು : (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

| |
|---|
| 1.ಜಿಗಣೆ ಸಂತತಿ ಇಳಿಮುಖವಾಗಲೂ ಕಾರಣವೇನು ? |
| |
| 2. ಜಿಗಣೆಗೆ ಯಾವ ಪ್ರಾಣಿಯ ರಕ್ತವೆಂದರೆ ಇಷ್ಟ ? |
| |
| 3. ಹಿರುಡಿನ್ ಜೊಲ್ಲಿನ ಕೆಲಸವೇನು ? |
| |

**III. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಗುರು ವಸಿಷ್ಠಂಗೆರಗಿ ನೇಮವಂ ಪಡೆದಖಿಳ
ಗುರುವಿರೂಪಾಕ್ಷಲಿಂಗವನು ಬೀಳ್ಕೊಂಡು ಭಾ
ಸುರ ವರೂಥವನೇರಿ ಭೂಪಾಲ ಮಕರಧ್ವಜಂ ನಡೆಯೆ ತಡೆವೇಂಟೆಗೆ ।
ಪರಿಕರದ ಪರಿವಾರವನುವಾಗಿ ವಿಪಿನದೊಳು
ಹರೆದು ನಡೆಯಲ್ಕತ್ತಲಿತ್ತ ಕೌಶಿಕ ಮುನೀ
ಶ್ವರನೊಂದು ಮಾಯಾವರಾಹನಂ ಮಾಡಿ ಕಳುಹಿದನು ಭೂರಮಣನೆಡೆಗೆ ॥

| |
|---|
| ( **ಸಹಾಯಕ ಪದಗಳು** ) : ಎರಗಿ–ನಮಸ್ಕರಿಸಿ , ನೇಮ–ಅಪ್ಪಣೆ ,ಭೂಪಾಲ–ರಾಜ , ವೇಂಟೆ–ಬೇಟೆ , ಭೂರಮಣ–ರಾಜ(ಹರಿಶ್ಚಂದ್ರ) |

**ಪ್ರಶ್ನೆಗಳು (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

| |
|---|
| 1) ಭೂರಮಣನೆಡೆಗೆ ಮಾಯಾವರಾಹವನ್ನು ಯಾರು ಕಳುಹಿಸಿದರು ? |
| |
| 2) ಹರಿಶ್ಚಂದ್ರನು ಯಾರಿಗೆ ನಮಸ್ಕರಿಸಿ ಅಪ್ಪಣೆ ಪಡೆದನು ? |
| |
| 3) ಭೂಪಾಲ ಹರಿಶ್ಚಂದ್ರ ಎಲ್ಲಿಗೆ ಹೊರಟನು ? |
| |

IV. **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಕನಿಷ್ಠ ಆರು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

1) ಕನ್ನಡ ವರ್ಣಮಾಲೆಯ ಹ್ರಸ್ವ ಸ್ವರಗಳನ್ನು ಬರೆಯಿರಿ

2) ಹೊಯ್ಸಳೇಶ್ವರ – ಈ ಪದವನ್ನು ಬಿಡಿಸಿ ಬರೆಯಿರಿ

3) ಬೆಟ್ಟದಾವರೆ – ಈ ಪದವನ್ನು ವಿಗ್ರಹಿಸಿ ಬರೆಯಿರಿ

4) ಅರಮನೆಗೆ – ಈ ಪದದಲ್ಲಿನ ವಿಭಕ್ತಿ ಹೆಸರು ತಿಳಿಸಿ.

5) ಊರೂರು , ಪಟಪಟ – ಇವುಗಳಲ್ಲಿ ದ್ವಿರುಕ್ತಿ ಪದ ಯಾವುದು ?

6) ಲಕ್ಷ್ಮಣ , ಬೆಟ್ಟ – ಇವುಗಳಲ್ಲಿ ರೂಢನಾಮ ಪದ ಬರೆಯಿರಿ.

7) ಸೀತೆಯ ಮುಖಕಮಲ ಅರಳಿತು – ಇದರಲ್ಲಿನ ಅಲಂಕಾರ ಹೆಸರಿಸಿ

8) ಕತೆ : ಕತೆಗಾರ :: ನಾಟಕ : ___________

9) ಆಡುವ ಗುಂಡಯ್ಯನ ಹೊಸ ನೃತ್ಯಂ – ಈ ವಾಕ್ಯಕ್ಕೆ ಪ್ರಸ್ತಾರ ಹಾಕಿರಿ

10) ಷಟ್ಪದಿ ಛಂದಸ್ಸಿನಲ್ಲಿ ಎಷ್ಟು ಪಾದಗಳಿರುತ್ತವೆ. ?

*****